# ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ರವರ ನ್ಯಾಯಾಲಯ, ಮಧುಗಿರಿ

## ಸಿ.ಸಿ.ಸಂಖ್ಯೆಃ 2049/2021

ಪ್ರಾ.ಸಾ-1

ಚಾಸಾ-3

ದಿನಾಂಕಃ22-09-2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| **ಹೆಸರು** | ಟಿ. ಯೋಗನಂದ |
| **ತಂದೆಯ / ಗಂಡನ ಹೆಸರು** | ಹೆಚ್ ವಿ. ತಿಮ್ಮಣ್ಣ |
| **ವಯಸ್ಸು** | 50 ವರುಷ |
| **ಉದ್ಯೋಗ** | ಅಬಕಾರಿ ಉಪನಿರೀಕ್ಷಕರು, ಬನ್ನೇರುಘಟ್ಟ ವಲಯ, ಬೆಂಗಳೂರು |
| **ವಾಸಸ್ಥಳ** | ಚಂದಾಪುರ ,ಆನೇಕಲ್ ತಾಲ್ಲೂಕು |

**ಮುಖ್ಯ ವಿಚಾರಣೆ ಮಾನ್ಯ ಎಪಿಪಿಯವರಿಂದ ಃ**

ನಾನು 12/02/2021 ರಿಂದ 25/01/2022 ನಾನು ಅಬಕಾರಿ ಇಲಾಖೆ ಮಧುಗಿರಿ ಉಪವಿಭಾಗದಲ್ಲಿ ಅಬಕಾರಿ ಮುಖ್ಯಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 09/04/2021 ರಂದು ಬೆಳಿಗ್ಗೆ 7.00 ಗಂಟೆ ಸಮಯದಲ್ಲಿ ಚಾಸಾ7 ರವರು ಕರೆ ಮಾಡಿ ಕಚೇರಿಗೆ ಬರುವಂತೆ ತಿಳಿಸಿದ್ದು, ನಾನು 7.05 ನಿಮಿಷಕ್ಕೆ ಕಚೇರಿಗೆ ಹೋದೆ. ಚಾಸಾ7 ರವರು ತನಗೆ ಮಧುಗಿರಿ ತಾಲ್ಲೂಕುನ ಐ ಡಿ ಹಳ್ಳಿ ಹೋಬಳಿ ತಾಡಿ ಗ್ರಾಮದ ಜಗದೀಶ್ ಎನ್ನುವರ ಮನೆಯಲ್ಲಿ ಅಕ್ರಮವಾಗಿ

ಮದ್ಯವನ್ನು ಸಂಗ್ರಹಿಸಿ ಇಟ್ಟು ಕೊಂಡಿದ್ದಾರೆಂದು ಮಾಹಿತಿ ಬಂದಿದ್ದು , ಸದರಿ ಮಾಹಿತಿಯನ್ನು ನನಗೆ, ಅಬಕಾರಿ ಉಪನಿರೀಕ್ಷಕರಾದ ಸುರೇಶ್ , ಚಾಸಾ4 ರಿಂದ 6 ರವರಿಗೆ ತಿಳಿಸಿ , ಮಧುಗಿರಿ ಉಪವಿಭಾಗ ವಲಯದ ಸರಕಾರಿ ವಾಹನದಲ್ಲಿ ನಾನು, ಚಾಸಾ4 ಹಾಗೂ ಸುರೇಶ್ ರವರು , ಹಾಗೂ ಮತೊಂದು ವಾಹನದಲ್ಲಿ ಚಾಸಾ5 ರಿಂದ 7 ರವರು ಬೆಳಿಗ್ಗೆ 7.45 ಗಂಟೆ ಸಮಯಕ್ಕೆ ತಾಡಿ ಗ್ರಾಮ ತಲುಪಿದ್ದು, ಬಸ್ ನಿಲ್ದಾಣದ ಬಳಿ ನಿಂತಿದ್ದ ಚಾಸಾ1 ಮತ್ತು 2 ರನ್ನು ಪರಿಚಯ ಮಾಡಿಕೋಂಡು ಸದರಿಯವರಿಗೆ ಮಾಹಿತಿ ತಿಳಿಸಿ ದಾಳಿ ಕಾಲದಲ್ಲಿ ಪಂಚರಾಗಿ ಇರಬೇಕೆಂದು ಪತ್ರ ಮುಖೇನ ಕೇಳಿಕೊಂಡ ಮೇರೆಗೆ ಅವರು ಒಪ್ಪಿದ್ದು ಅವರನ್ನು ಕರೆದುಕೊಂಡು ನಾವು ಆರೋಪಿಯ ಮನೆಯ ಹತ್ತಿರ ಹೋದೆವು. ಮನೆ ಬಾಗಿಲು ತೆರೆದಿತ್ತು . ಮನೆಯಲ್ಲಿ ಯಾರು ಇರಲಿಲ್ಲ. ಸ್ದ.ಳದಲ್ಲೆ ಶೋಧಾನ ವಾರಂಟ್ ತಯಾರು ಮಾಡಿ ಪರಸ್ಪರ ಅಂಗಶೋದನೆ ಮಾಡಿಕೊಂಡು ನಾನು , ಚಾಸಾ7, ಚಾಸಾ4 , 5 ರವರು ಪಂಚರ ಜೊತೆ ಮನೆಯ ಒಳಕ್ಕೆ ಹೋದೆವು. ಹಾಲ್ ನ ಬಲಭಾಗದಲ್ಲಿ ಮಂಚ ಇದ್ದು ಮಂಚದ ಕೆಳಗೆ ರಟ್ಟಿನ ಬಾಕ್ಸ ಇರುವುದು ಕಂಡು ಬಂತು. ಒಟ್ಟು 4 ರಟ್ಟಿನ ಬಾಕ್ಸ ಇದ್ದು, ಅವುಗಳನ್ನು ತೆರೆದು ಪರಿಶೀಲಿಸಲಾಗಿ 3 ರಟ್ಟಿನ ಬಾಕ್ಸ ಗಳಲ್ಲಿ 180 ಎಂ ಎಲ್ ಒಲ್ಡ ಟಾವರೀನ್ ವಿಸ್ಕಿ ಇದ್ದು ಅವುಗಳಪೈಕಿ 2 ರಟ್ಟಿನ ಬಾಕ್ಸ ಗಳಲ್ಲಿ 48 ಟೆಟ್ರಾ ಪ್ಯಾಕೇಟ್ ಗಳುಹಾಗೂ ಮತ್ತೊಂದುರಟ್ಟಿನ ಬಾಕ್ಸ ಲ್ಲಿ 40 ಟೇಟ್ರಾ ಪ್ಯಾಕೇಟ್ ಗಳು ಇದ್ದವು. 4 ನೇ ರಟ್ಟಿನ ಬಾಕ್ಸನಲ್ಲಿ 90 ಎಂ ಎಲ್ ನ ಬೆಂಗಳೂರು ಮಾಲ್ಟ ನ 92 ಟೆಟ್ರಾ ಪ್ಯಾಕೇಟ್ ಗಳು ಇದ್ದವು. ಅಲ್ಲಿದ ಗ್ರಾಮಸ್ದ.,ರಿಂದ ಆತನ ಹೆಸರು ವಿಳಾಸ ತಿಳಿಯಲಾಗಿ ಜಗದೀಶ ಬಿನ್ ರಾಜಶೇಖರ , ಎಂದು ತಿಳಿದು ಬಂತು. ಸ್ದ.ಳದಲ್ಲಿ ವಿವರವಾದ ಮಹಜರ್ ಬರೆದು 4 ರಟ್ಟಿನ ಬಾಕ್ಸಗಳು ಹಾಗೂ ಅವುಗಳಲ್ಲಿ ದ್ದ ಮದ್ಯವನ್ನು ಅಮಾನತ್ತುಪಡಿಸಿಕೊಂಡೆವು ಅವುಗಳ ಪೈಕಿ 180 ಎಂ ಎಲ್ ನ ಒಲ್ಡ ತಾವರೀನ್ ವಿಸ್ಕಿಯ 15 ಪ್ಯಾಕೇಟ್ ಗಳನ್ನು ಹಾಗೂ 90 ಎಂ ಎಲ್ ನಬೆಂಗಳೂರು ಮಾಲ್ಟ ವಿಸ್ಕಿ ಯ 30 ಟೆಟ್ರಾ ಪ್ಯೇಕಟ್ ಗಳನ್ನು ಎಫ್ ಎಸ್ ಎಲ್ ಗೆ ಕಳುಹಿಸುವ ಸಲುವಾಗಿ ಪ್ರತ್ಯೇಃಕವಾಗಿ ಚೀಲದಲ್ಲಿ ಹಾಕಿ ಹರಗು ಹಚ್ಚಿ ಸೀಲು ಮಾಡಿ ಇಲಾಖಾ ಸೀಲು 166 ಎಂದು ಸೀಲು ಹಾಕಿ ಬೆಳಿಗ್ಗೆ 8.30 ರಿಂದ 9.30 ವರೆಗೆ ಮಹಜರ್ ಕ್ರಮ

ಜರುಗಿಸಿ ಸದರಿ ಮದ್ಯವನ್ನು ಹಾಗೂ ರಟ್ಟಿನ ಬಾಕ್ಸಗಳನ್ನು ಪಂಚರ ಸಮಕ್ಷಮ ಅಮಾನತ್ತುಪಡಿಸಿಕೊಂಡಿರುತ್ತೇವೆ. ಸಾಕ್ಷಿ ಮಹಜರ್ ನೋಡಿ ಗುರುತಿಸಿದ್ದು ಅದನ್ನು ನಿಪಿ1 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ1 ಎ ಎಂದು ಗುರುತಿಸಲಾಯಿತು. ಸದರಿ ಮಹಜರ್ ನ್ನು ನಾನೇ ನನ್ನ ಕೈಬರವಣಿಗೆಯಲ್ಲಿ ಬರೆದಿರುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ 180 ಎಂ ಎಲ್ ನ ಒಲ್ಡ ತಾವರೀನ್ ವಿಸ್ಕಿಯ 15 ಟೆಟ್ರಾ ಪ್ಯಾಕೇಟ್ ಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮು.ಮಾಲು 1 ಎಂದು ಹಾಗೂ 90 ಎಂ ಎಲ್ ಬೆಂಗಳೂರುಮಾಲ್ಟ ವಿಸ್ಕಿಯ 30 ಟೆಟ್ರ ಪ್ಯಾಕೇಟ್ ಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮು.ಮಾಲು 2 ಎಂದು ಗುರುತಿಸಲಾಯಿತು. , ಸ್ಥಳದಲ್ಲಿ ವಿಡಿಯೋ ಚಿತ್ರಿಕರಣ ಮಾಡಿರುತ್ತೇವೆ.

**ಪಾಟೀಸವಾಲು ಃ ಶ್ರೀ ಎನ್. ಆರ್. ಆರೋಪಿ ಪರ ವಕೀಲರಿಂದ ಃ**

ನನಗೆ ಮಾಹಿತಿ ಬಂದಿರಲಿಲ್ಲ ಚಾಸಾ7 ರವರಿಗೆ ಬಂದಿತ್ತು. ಅವರಿಗೆ ಎಷ್ಟು ಗಂಟೆ ಗೆ ಮಾಹಿತಿ ಬಂತು ಎಂದು ನಾನುಕೇಳಿಲಲ. ಚಾಸಾ7 ರವರು ನನಗೆ ಬೆಳಿಗ್ಗೆ 7.00 ಗಂಟೆ ಗೆ ಫೋನ್ ಮೂಲಕ ತಿಳಿಸಿದರು. ನಾನು ಕಚೇರಿಗೆ ಹೋದಾಗ ಬೆಳಿಗ್ಗೆ 7.05 ಆಗಿತ್ತು. ಕಚೇರಿಯಲ್ಲಿ ನಾನು, ಚಾಸಾ4 ರಿಂದ 7 ಹಾಗೂ ಸುರೇಶ್ ರವರುಹಾಜರಿದ್ದರು. ಕಚೆರಿಯನ್ನು ಬೆಳಿಗ್ಗೆ 7.15 ಗಂಟೆಗೆ ಬೆಟ್ಟೆವು. ನಮ್ಮ ವಾಹನ ಮೊದಲು ಹೊರಟಿತು. ಎರಡು ವಾಹನಗಳ ನೋಂದಣಿಸಂಖ್ಯೆನೆನಪಿಲ್ಲ. ಎರಡು ವಾಹನಗಳು ನಮ್ಮ ಇಲಾಖೆ ವಾಹನ ಗಳೇ. ನಾವು ಪುರವರ ಮಾರ್ಗವಾಗಿ ಹೋದೆವು. ಮಧುಗಿರಿಯಿಂದ ತಾಡಿಗೆ ಸುಮಾರು 25 ರಿಂದ 30 ಕಿ ಮಿ ದೂರ ಆಗುತ್ತದೆ. ತಾಡಿ ಗ್ರಾಮ ತಲುಪಿದಾಗ ಬೆಳಿಗೆ 7.45 ಗಂಟೆ ಆಗಿತ್ತು. ಚಾಸಾ1 ಮತ್ತು 2 ಇಬ್ಬರು ಮಧುಗಿರಿ ಟೌನ್ ರವರು. ಅವರು ತಾಡಿ ಗ್ರಾಮಕ್ಕೆ ಕೂಲಿ ಕೆಲಸಕ್ಕೆ ಬಂದಿರುತ್ತೆವೆಂದು ಹೇಳಿರುತ್ತಾರೆ. ತಾಡಿ ಬಸ್ ನಿಲ್ದಾಣದಿಂದ ಆರೋಪಿಯಮನೆಗೆ ಸುಮಾರು 150 ರಿಂದ 200 ಮೀಟರ್ ದೂರ ಆಗುತ್ತದೆ. ಸಾಮಾನ್ಯವಾಗಿ ಬೆಳಿಗಿನಜಾವದಲ್ಲಿ ಮನೆಯಲ್ಲಿ ಮನೆ ಸದಸ್ಯರು ಇರುತ್ತಾರೆ. ನಾವು ಸ್ಥಳಕ್ಕೆ ಹೋದಾಗ ಸುಮಾರು 25 ರಿಂದ 30 ಜನ ಗ್ರಾಮಸ್ಥರು ಅಲ್ಲಿಗೆ ಬಂದಿದ್ದರು. ಅವರು ಆರೋಪಿಯ

ಮನೆ ಹತ್ತಿರ ನಿಂತಿದ್ದರು. ಆರೋಪಿಯ ಮನೆಯ ಅಕ್ಕಪಕ್ಕ ಹಲವಾರು ವಾಸದ ಮನೆ ಇವೆ ಎಂದರೆ ಸರಿ. ಆರೋಪಿಯ ಮನೆಯಲ್ಲಿ ಯಾರು ಇರಲಿಲ್ಲದಿದ್ದ ಕಾರಣ ನ್ಯಾಯಾಲಯದಿಂದ ಶೋಧನಾ ವಾರಂಟ್ ನ್ನು ಪಡೆಯಬೇಕಿತ್ತು ಎಂದರೆ ಸರಿ. ನಿಪಿ1 ನ್ನು ಅಧಿಕಾರಿಗಳು ಹೇಳಿದಂತೆ ನಾನೇ ಬರೆದೆ. ಅಮಾನತ್ತುಪಡಿಸಿಕೊಂಡೆವು ಎಂದು ಹೇಳಲಾದ ಮದ್ಯದ ಬ್ಯಾಚ್ ನಂ., ಸೀರಿಯಲ್ ನಂ. ವಿಶಿಷ್ಟ ಗುರುತುಸಂಖ್ಯೆ, ಕಂಪನಿ ಹೆಸರು ಇತ್ಯಾದಿಗಳನ್ನು ನಿಪಿ1 ರಲ್ಲಿ ನಮೂದು ಮಾಡಿಲ್ಲ. ಮಹಜರ್ ಬರೆಯುವಾಗ ಆರೋಪಿಯ ಮನೆಯ ಹೊರಗೆ 25 ರಿಂದ 30 ಜನ ಗ್ರಾಮಸ್ಥರು ಸೇರಿದ್ದರು. ಅವರನ್ನು ಮಹಜರ್ ಗೆ ಸಹಿ ಮಾಡುವಂತೆ ಅಧಿಕಾರಿಗಳು ಕೇಳಿಕೋಂಡು ಅವರು ಯಾರು ಒಪ್ಪಿರುವುದಿಲ್ಲ. ಸದರಿ ದಿನ ನಾವು ಗಸ್ತು ಮಾಡಿರುವುದಿಲ್ಲ, ಆರೋಪಿಯ ಮನೆಯನ್ನು ಶೋಧನೆ ಮಾಡಿಲ್ಲ, ಯಾವುದೇ ಮದ್ಯವನ್ನು ವಶಪಡಿಸಿಕೊಂಡಿಲ್ಲ, ಸ್ಥಳದಲ್ಲಿ ಯಾವುದೇ ಮಹಜರ್ ಬರೆದಿಲ್ಲ, ಮಹಜಜರ್ ನ್ನು ನಮ್ಮ ಕಚೇರಿಯಲ್ಲೆ ಸೃಷ್ಟಿಸಿಕೊಂಡಿದ್ದು ಎಂದರೆ ಸರಿಯಲ್ಲ. ಮು ಮಾಲು 1 ಮತ್ತು 2 ಕ್ಕೂ ಆರೋಪಿಗೂ ಯಾವುದೇ ಸಂಬಂಧವಿಲ್ಲ, ಆದರೂ ಸಹ ಆತನ ವಿರುದ್ದಅ, ಸುಳ್ಳು ಪ್ರಕರಣವನ್ನು ಠಾಣಾ ಅಂಕಿಅಂಶಕೊಸ್ಕರ ದಾಖಲು ಮಾಡಿ ನನ್ನ ಮೇಲಾಧಿಕಾರಿಗಳು ಹೇಳಿದಂತೆ ಈದಿನ ನಾನು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ.**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಮಧುಗಿರಿ.**